ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ  ನ್ಯಾಯಾಲಯ

ಸಿದ್ದಾಪುರ

ಸಿ.ಸಿ. 107/2024

| | |
|---|---|
| ಸಿ.ಡಬ್ಲ್ಯೂ: | 14 |
| ಪಿ.ಡಬ್ಲ್ಯೂ: | 9 |

| | | |
|---|---|---|
| **ಸಾಕ್ಷಿದಾರರ ಹೆಸರು** | : | ದೇವರಾಜ ಟಿ |
| ತಂದೆ ಹೆಸರು | : | ತಿಮ್ಮಾ |
| ವಯಸ್ಸು | : | 42  ವರ್ಷ |
| ವೃತ್ತಿ | : | ಮುಖ್ಯ ಪೇದೆ ಶಿರಸಿ ಸಂಚಾರ ಪೊಲೀಸ್ ಠಾಣೆ |
| ವಾಸ | : | ಶಿರಸಿ |

**ಸಾಕ್ಷಿಗೆ  ಪ್ರಮಾಣ  ವಚನ  ಮಾಡಿಸಿದ ದಿನಾಂಕ: 13–08–2026**

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ನಾನು 2023 ರಿಂದ  ಜನೇವರಿ 2025 ರವರೆಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ  ದಿ: 29-02-2024 ರಂದು ನಾನು ಠಾಣಾ ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ರಾತ್ರಿ 11-30 ಗಂಟೆಗೆ  ಸಿದ್ದಾಪುರ ಆಸ್ಪತ್ರೆಯಿಂದ MLC ಮಾಹಿತಿ ಬಂದಿದ್ದು ಅದರಂತೆ ನಾನು ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಾದ ಮೋಹನ ರವರನ್ನು ವಿಚಾರಿಸಿ ದಿನಾಂಕ: 29-02-2024 ರ ರಾತ್ರಿ 11-45 ಗಂಟೆಯಿಂದ ದಿ: 01-03-2024 ರ ಬೆಳಿಗಿನ ಜಾವ 12-15 ಗಂಟೆಯವರೆಗೆ ಅವರ ಹೇಳಿಕೆ ದೂರನ್ನು ಪಡೆದುಕೊಂಡು , ನಂತರ ವಾಪಸ್ ಠಾಣೆಗೆ ಬಂದು, ಸದ್ರಿ ಹೇಳಿಕೆ ದೂರಿನ ಸಾರಾಂಶದಿಂದ ಠಾಣೆ ಗುನ್ನಾ ಸಂಖ್ಯೇ 27/2024 ರಂತೆ ಪ್ರಕರಣವನ್ನು ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನೀವೆದಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಈಗ ಹೇಳಿಕೆ ದೂರನ್ನು ನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.14 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಪ್ರ.ವ.ವರದಿಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.15 ಎಂದು ಗುರುತಿಸಲಾಯಿತು.

ನಂತರ ತನಿಖೆಯನ್ನು ಮುಂದುವರೆಸಿ ದಿಃ 01-03-2024 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿದ್ದ ಇಬ್ಬರು ಪಂಚರನ್ನು ಬರಮಾಡಿಕೊಂಡು, ದೂರುದಾರರು ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಂತರ ಸಿಬ್ಬಂದಿಗಳ ಸಹಾಯದ ಘಟನಾ ಸ್ಥಳದ ಛಾಯಾ ಚಿತ್ರವನ್ನು ಪಡೆದುಕೊಂಡಿರುತ್ತೇನೆ. ನಂತರ ಘಟನಾ ಸ್ಥಳ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ನಂತರ ಕೃತ್ಯಕ್ಕೆ ಬಳಸಿದ ಕಾಡು ಜಾತಿಯ ಬಡಿಗೆಯನ್ನು ದೂರುದಾರರು ತೋರಿಸಿದ್ದು ಅದನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಿದ್ದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಕಚ್ಚಾ ನಕಾಶೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನಾಲ್ಕು ಪೋಟೋಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ-3 ರಿಂದ 6 ಎಂದು ಗುರುತಿಸಲಾಗಿರುತ್ತದೆ.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಆ ದಿನ ನಾನು ವಶಪಡಿಸಿಕೊಂಡ ವಸ್ತು ಇದೇ ಎಂದು ನುಡಿಯುತ್ತಾರೆ ಅದನ್ನು ಈಗಾಗಲೇ MO1 ಎಂದು ಗುರುತಿಸಲಾಗಿರುತ್ತದೆ.

ನಂತರ ವಾಪಸ ಠಾಣೆಗೆ ಬಂದು ವಶಪಡಿಸಿಕೊಂಡ ಬಡಿಗೆಗೆ ಸಂಬಂದಿಸಿದಂತೆ ಸ್ವತ್ತು ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ಸಾಕ್ಷಿಗೆ ಈಗ ಸ್ವತ್ತು ಪಟ್ಟಿಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ- 16 ಎಂದು ಅದರಲ್ಲಿ ರುವ ಸಾಕ್ಷಿಯ ಸಹಿಯನ್ನು ನಿ.ಪಿ- 16(ಎ) ಎಂದು ಗುರುತಿಸಲಾಯಿತು.

ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-15 ರವರೆಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ದೂರುದಾರರು ನೀಡಿದ ಸುಳ್ಳು ದೂರಿನ ಮೇಲೆ ನಾನು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 01-03-2024 ರಂದು ಘಟನಾ ಸ್ಥಳವನ್ನು ನನಗೆ ದೂರುದಾರರು ತೋರಿಸಿರುತ್ತಾರೆ, ಪಂಚರರು ಸ್ಥಳದಲ್ಲೆ ಇದ್ದು ನಾನು ನೋಟಿಸನ್ನು ನೀಡಿ ಬರಮಾಡಿಕೊಂಡಿರುತ್ತೇನೆ.

ಬಡಿಗೆ ಎಲ್ಲಿ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಘಟನಾ ಸ್ಥಳದಿಂದ 10 ಅಡಿ ದೂರದಲ್ಲಿತ್ತು ಎಂದು ನುಡಿಯುತ್ತಾರೆ.

ಆ ದಿನ ನಾನು ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ವಸ್ತು ವನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನಕಾಶೆಯನ್ನು ಹಾಗೂ ಪೊಟೋಗಳನ್ನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರರು ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಸಾ.ಓ.ಹೇ.ಸ.ಒ**

ಸಹಿ ಇದೆ/-

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**

**ಸಿದ್ದಾಪುರ**